**ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ .**

ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ, ಆದರೆ ದಾಖಲಾತಿಗಳ ಆಧಾರದ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ. ಅರ್ಜಿದಾರರಿಗೆ ಕೆಲಸ ಮಾಡುವ ಸಂದರ್ಭದಲ್ಲಿ ಅಪಘಾತ ಸಂಭವಿಸಿತು ಎಂದರೆ ಸರಿ. ಸದರಿ ಅಪಘಾತದಲ್ಲಿ ಅರ್ಜಿದಾರರ ಎರಡು ಬೆರಳುಗಳು ಹಾನಿಗೊಂಡಿವೆ ಎಂದರೆ ಸರಿ. ಅರ್ಜಿದಾರರು ವೈದ್ಯಕೀಯ ದಾಖಲಾತಿಗಳನ್ನು ನಮ್ಮ ಸಂಸ್ಥೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಆರ್ 3 ರಲ್ಲಿ ನಮೂದಿಸಿದ ಹಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಬಿಲ್ಲುಗಳನ್ನು ನೀಡಿರುತ್ತಾರೆ. ಅರ್ಜಿದಾರರು ನಾವು ನೀಡಿದ ಹಣಕ್ಕಿಂತ ಹೆಚ್ಚುವರಿಯಾಗಿ ರೂ.1,20,000/-ಕ್ಕಿಂತಲೂ ಹೆಚ್ಚಿನ ಹಣವನ್ನು ಚಿಕಿತ್ಸೆಗೆ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ.

ನಿಪಿ 1 ಮತ್ತು 2 ಅನ್ನು ಅರ್ಜಿದಾರರು ನಮ್ಮ ಸಂಸ್ಥಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯೊಂದಿಗೆ ದಾಖಲಾತಿಗಳನ್ನೂ ಸಹ ಅರ್ಜಿದಾರರು ನೀಡಿರುತ್ತಾರೆ ಎಂದರೆ ಸರಿ. ಅರ್ಜಿದಾರರು ನಮ್ಮ ಸಂಸ್ಥಗೆ ನೀಡಿರುವ ಪತ್ರಗಳಿಗೆ ನಾವು ಸೂಕ್ತ ಪ್ರತಿಕ್ರಿಯೆ ನೀಡಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಅರ್ಜಿದಾರರು ನಮ್ಮ ಸಂಸ್ಥಗೆ ನೀಡಿದ್ದರೂ ಸಹ ನಾವು ಹಾಜರುಪಡಿಸಿಲ್ಲ ಎಂದು ಮರುಪತ್ರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರು ನಿರ್ವಹಿಸುತ್ತಿದ್ದ ಕೆಲಸದ ಬಗ್ಗೆ ನನಗೆ ಮಾಹಿತಿ ಇದೆ. ಹುದ್ದೆ ಬದಲಾವಣೆ ಕೋರಿ ಅರ್ಜಿದಾರರು ಅರ್ಜಿಯನ್ನು ನೀಡಿದ್ದರು. ಆದರೂ ಸಹ ನಾವು ಅವರ ಹುದ್ದೆಯನ್ನು ಬದಲಾವಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ

ಬಡ್ಡಿಯನ್ನು ನೀಡಲಾಗಿದ್ದು, ಅದು ಜೇಷ್ಠತೆಯ ಮೇಲೆ ಅವಲಂಬಿಸಿದ್ದು, ಅಪಘಾತದ ಪರಿಹಾರವಾಗಿ ಅಲ್ಲ ಎಂದರೆ ಸರಿ. ವೈದ್ಯಕೀಯ ವೆಚ್ಚಗಳನ್ನು ಹೊರತುಪಡಿಸಿ ಇತರ ಪರಿಹಾರವನ್ನು ನಮ್ಮ ಸಂಸ್ಥೆಯಿಂದ ಅರ್ಜಿದಾರರಿಗೆ ನೀಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಆದಾಯದಲ್ಲಿ ಯಾವುದೇ ನಷ್ಟ ಆಗದೇ ಇರುವ ಕಾರಣ ನೀಡಿಲ್ಲ ಎಂದು ನುಡಿಯುತ್ತಾರೆ. ಪರಿಹಾರ ಪಾವತಿಸುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**